<u>**ಕರ್ನಾಟಕ ವಿಧಾನ ಪರಿಷತ್ತು**</u>

<table>
<tr><td colspan="2">ಮಾನ್ಯ ಸದಸ್ಯರ ಹೆಸರು:</td><td>ಶ್ರೀ ಶಶೀಲ್ ಜಿ.ನಮೋಶಿ ಮತ್ತು ಶ್ರೀ.ನಿರಾಣಿ ಹಣಮಂತ್ ರುದ್ರಪ್ಪ</td></tr>
<tr><td colspan="2">ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>1677(1791+1793)</td></tr>
<tr><td colspan="2">ಉತ್ತರಿಸಬೇಕಾದ ದಿನಾಂಕ</td><td>23.03.2026</td></tr>
<tr><td colspan="2">ಉತ್ತರಿಸುವ ಸಚಿವರು</td><td>ಮಾನ್ಯ ಉನ್ನತ ಶಿಕ್ಷಣ ಸಚಿವರು</td></tr>
<tr><td>ಅ)</td><td>ಕಾಲೇಜು ಶಿಕ್ಷಣ ಇಲಾಖೆಯ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಗ್ರಂಥಾಲಯ ಸಹಾಯಕರ ಹುದ್ದೆಗೆ ಕರ್ನಾಟಕ ಲೋಕಸೇವಾ ಆಯೋಗವು (KPSC) ಪ್ರಕಟಿಸಿದ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆಯೇ;</td><td>ಕಾಲೇಜು ಶಿಕ್ಷಣ ಇಲಾಖೆಯ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಗ್ರಂಥಾಲಯ ಸಹಾಯಕರ ಹುದ್ದೆಗೆ ಕರ್ನಾಟಕ ಲೋಕಸೇವಾ ಆಯೋಗವು (KPSC) ಪ್ರಕಟಿಸಿದ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿರುವುದಿಲ್ಲ.</td></tr>
<tr><td>ಅ)</td><td>ಈ ಆಯ್ಕೆಪಟ್ಟಿಯ ಕ್ರಮ ಸಂಖ್ಯೆ 7ರಲ್ಲಿರುವ ಅಭ್ಯರ್ಥಿಯ (ನೋಂದಣಿ ಸಂಖ್ಯೆ:8709112) ಅವರಿಗೆ ನೇಮಕಾತಿಯನ್ನು ನಿರಾಕರಿಸಲು ಕಾರಣಗಳೇನು:</td><td>ಕಾಲೇಜು ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ, ಗ್ರಂಥಾಲಯ ಸಹಾಯಕರ ಹುದ್ದೆಗೆ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.<br><br>1) Must have passed S.S.LC or equivalent examination.<br>2) Must be a holder of Diploma in Library Science.<br><br>ಕರ್ನಾಟಕ ಲೋಕಸೇವಾ ಆಯೋಗವು ಪ್ರಕಟಿಸಿರುವ ಅಂತಿಮ ಆಯ್ಕೆಪಟ್ಟಿಯಲ್ಲಿ ಕ್ರಮ ಸಂಖ್ಯೆ:(7) ರಲ್ಲಿನ ಅಭ್ಯರ್ಥಿಯು (ನೋಂದಣಿ ಸಂಖ್ಯೆ:8709112) ಗುಜರಾತ್ ರಾಜ್ಯದ Sabaramathi University (formerly Calorx Teacher's University) ಯಿಂದ 2012ನೇ ಸಾಲಿನಲ್ಲಿ ಪಡೆದಿರುವ 01 ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಸಲ್ಲಿಸಿರುತ್ತಾರೆ.<br>ಹೊರರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದಿರುವ ಒಂದು ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯು (ಗ್ರಂಥಾಲಯ ವಿಷಯ) ರಾಜ್ಯದ 03 ವರ್ಷಗಳ ಡಿಪ್ಲೊಮಾಗೆ ಸಮಾನಾಂತರವಾಗುವುದಿಲ್ಲ. ಆದ್ದರಿಂದ ಸದರಿಯವರು ಗ್ರಂಥಾಲಯ ಸಹಾಯಕರ ಹುದ್ದೆಗೆ ಅರ್ಹರಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿಯವರನ್ನು ಇಲಾಖೆಯ ಗ್ರಂಥಾಲಯ ಸಹಾಯಕರ ಹುದ್ದೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ ಎಂಬುದಾಗಿ ಸದರಿ ಅಭ್ಯರ್ಥಿಗೆ (ನೋಂದಣಿ ಸಂಖ್ಯೆ:8709112) ಈಗಾಗಲೇ ಹಿಂಬರಹ ನೀಡಲಾಗಿದೆ. (ಅನುಬಂಧದಲ್ಲಿ ಒದಗಿಸಿದೆ)</td></tr>
</table>

| | | |
|---|---|---|
| ಇ) | ಹೊರ ರಾಜ್ಯದ ಸಬರಮತಿ ವಿಶ್ವವಿದ್ಯಾಲಯದಿಂದ ಪಡೆದ 01 ವರ್ಷದ ವಿದ್ಯಾರ್ಹತೆಯು ರಾಜ್ಯದ 03 ವರ್ಷಗಳ ಡಿಪ್ಲೋಮಾಗೆ ಸಮನಾಂತರವಾಗಿರುವುದಿಲ್ಲ ಎಂಬ ನಿರ್ಧಾರಕ್ಕೆ ಬರಲು ಅನುಸರಿಸಿದ ಮಾನದಂಡಗಳೇನು; | ಹೊರರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದಿರುವ ಒಂದು ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯು (ಗ್ರಂಥಾಲಯ ವಿಷಯ) ರಾಜ್ಯದ 03 ವರ್ಷಗಳ ಡಿಪ್ಲೊಮಾಗೆ ತತ್ಸಮಾನವೇ ಎಂಬ ಬಗ್ಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಭಿಪ್ರಾಯ ಕೋರಲಾಗಿ, ಹೊರರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದಿರುವ ಒಂದು ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯು (ಗ್ರಂಥಾಲಯ ವಿಷಯ) ರಾಜ್ಯದ 03 ವರ್ಷಗಳ ಡಿಪ್ಲೊಮಾಗೆ ಸಮಾನಾಂತರವಾಗುವುದಿಲ್ಲ ಎಂದು ಉನ್ನತ ಶಿಕ್ಷಣ ಪರಿಷತ್ತು ತಿಳಿಸಿರುತ್ತದೆ. ಅಲ್ಲದೆ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ರಾಜ್ಯದಲ್ಲಿ ಪಡೆದಿರುವ Certificate in Library science issued from the Dept. of Vocational Education from the Govt. of Karnataka OR a Certificate in Library Science issued from the Government Training School by the Dept. of Public Libraries, Govt. of Karnataka ಎಂದಿರುತ್ತದೆ. ಈ ಹಿನ್ನೆಲೆಯಲ್ಲಿ ಹೊರ ರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದ 01 ವರ್ಷದ ವಿದ್ಯಾರ್ಹತೆಯು ರಾಜ್ಯದ 03 ವರ್ಷಗಳ ಡಿಪ್ಲೋಮಾಗೆ ಸಮನಾಂತರವಾಗಿರುವುದಿಲ್ಲ. |
| ಈ) | ಕೆ.ಪಿ.ಎಸ್.ಸಿ. ಅಧಿಸೂಚನೆಯಲ್ಲಿ ಕೇವಲ "Diploma in Library Science" ಎಂದು ನಮೂದಿಸಲಾಗಿದ್ದರೂ, ಈಗ 03 ವರ್ಷಗಳ ಡಿಪ್ಲೊಮಾವನ್ನೇ ಕಡ್ಡಾಯಗೊಳಿಸಿ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಗ್ರಂಥಾಲಯ ಸಹಾಯಕರ ಹುದ್ದೆಗೆ ಆಯ್ಕೆ ಮಾಡಿಕೊಳ್ಳಲು ಅವಕಾಶವಿದ್ದು, ಅರ್ಹತೆ ಹೊಂದಿರದ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲು ಸಾಧ್ಯವಿರುವುದಿಲ್ಲ. |
| ಉ) | ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳ ಹಿತರಕ್ಷಣೆಗಾಗಿ ಹಾಗೂ ವಿದ್ಯಾರ್ಹತೆಯ ಗೊಂದಲ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಇಡಿ 41 ಯುಇಸಿ 2026

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

Speed Post

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡಾವಳಿಗಳು**

ವಿಷಯ: ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಇಲಾಖೆಯ ಗ್ರಂಥಾಲಯ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ ಶ್ರೀ.ದೇವಿಂದ್ರಪ್ಪ, ಇವರ ನೇಮಕಾತಿ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ 45 ಆರ್ ಟಿ (4)ಬಿ/2016, ದಿನಾಂಕ:03.02.2022.
2. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ:R(4)1548/21-22/ಪಿಎಸ್‌ಸಿ, ದಿನಾಂಕ:14.02.2022.
3. ಈ ಕಛೇರಿ ಪತ್ರ ಸಂಖ್ಯೆ:ಡಿಸಿಇ/ಎಪಿಟಿ1/ಎಪಿಟಿ/4/2023, ದಿ:20.09.202
4. ಸರ್ಕಾರದ ಪತ್ರ ಸಂಖ್ಯೆ:ಇಡಿ:25:ಯುಜಿಹೆಚ್:2023(ಇ), ದಿ:15.07.2025

******

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇದ್ದ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಗ್ರಂಥಾಲಯ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಉಲ್ಲೇಖ-(01) ರ ಅಧಿಸೂಚನೆಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗವು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಉಲ್ಲೇಖ-(2) ರಂತೆ ಈ ಇಲಾಖೆಗೆ ಸಲ್ಲಿಸಿರುತ್ತದೆ. ಈ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವ ಮುನ್ನ ಅವರ ಅಂಕಪಟ್ಟಿ, ವಯಸ್ಸು, ವಿದ್ಯಾರ್ಹತೆ ಮತ್ತು ಕೋರಿರುವ ಮೀಸಲಾತಿಗಳ ಬಗ್ಗೆ ಮೂಲ ದಾಖಲೆಗಳ ನೈಜತೆಯನ್ನು ಪರಿಶೀಲಿಸಿದ ನಂತರವೇ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ತಿಳಿಸಲಾಗಿರುತ್ತದೆ. ಅದರನ್ವಯ ಗ್ರಂಥಾಲಯ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ ಒಟ್ಟು 12 ಅಭ್ಯರ್ಥಿಗಳ ಅಂಕಪಟ್ಟಿ, ವಯಸ್ಸು, ವಿದ್ಯಾರ್ಹತೆ ಮತ್ತು ಕೋರಿರುವ ಮೀಸಲಾತಿಗಳ ಬಗ್ಗೆ ಮೂಲ ದಾಖಲೆಗಳ ನೈಜತೆಯನ್ನು ಸಕ್ಷಮ ಪ್ರಾಧಿಕಾರಗಳಿಂದ ಪಡೆಯಲಾಗಿದೆ.

ಕಾಲೇಜು ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ, ಗ್ರಂಥಾಲಯ ಸಹಾಯಕರ ಹುದ್ದೆಗೆ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿದ್ದು, ಸದರಿ ವಿದ್ಯಾರ್ಹತೆಯನ್ನು ನಿಗದಿಪಡಿಸಿ, ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚನೆ ಹೊರಡಿಸಿರುತ್ತದೆ.

1) Must have passed S.S.L.C or equivalent examination.
2) Must be a holder of Diploma in Library Science.

ಕರ್ನಾಟಕ ಲೋಕಸೇವಾ ಆಯೋಗವು ಉಲ್ಲೇಖ-(1) ರಂತೆ ಪ್ರಕಟಿಸಿರುವ ಅಂತಿಮ ಆಯ್ಕೆಪಟ್ಟಿಯಲ್ಲಿ ಕ್ರಮ ಸಂಖ್ಯೆ:(7) ರಲ್ಲಿನ ಶ್ರೀ ದೇವಿಂದ್ರಪ್ಪ, (Reg.No.:8709112) ಇವರು ಹೊರ ರಾಜ್ಯದ ವಿಶ್ವವಿದ್ಯಾಲಯವಾದ ಗುಜರಾತ್ ರಾಜ್ಯದ Sabaramathi University (formerly Calorx Teacher's University) ಯಿಂದ 2012ನೇ ಸಾಲಿನಲ್ಲಿ ಪಡೆದಿರುವ 01 ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಸಲ್ಲಿಸಿರುತ್ತಾರೆ.

ಹೊರ ರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದಿರುವ 01 ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯನ್ನು ಪರಿಗಣಿಸಿ, ಗ್ರಂಥಾಲಯ ಸಹಾಯಕರ ಹುದ್ದೆಗೆ ನೇಮಕಾತಿ ನೀಡುವ ಸಂಬಂಧ ಸರ್ಕಾರದ ಮಾರ್ಗದರ್ಶನ ಕೋರಲಾಗಿ, ಸರ್ಕಾರವು ಉಲ್ಲೇಖ-(4) ರ ಪತ್ರದಲ್ಲಿ ಶ್ರೀ. ದೇವೀಂದ್ರಪ್ಪ ಇವರು ಹೊರರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದಿರುವ ಒಂದು ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯು (ಗ್ರಂಥಾಲಯ ವಿಷಯ) ರಾಜ್ಯದ 03 ವರ್ಷಗಳ ಡಿಪ್ಲೊಮಾಗೆ ಸಮಾನಾಂತರವಾಗುವುದಿಲ್ಲ. ಆದ್ದರಿಂದ ಸದರಿಯವರು ಗ್ರಂಥಾಲಯ ಸಹಾಯಕರ ಹುದ್ದೆಗೆ ಅರ್ಹರಿರುವುದಿಲ್ಲ ಎಂಬುದಾಗಿ ನಿರ್ದೇಶನ ನೀಡಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಆದೇಶ;

**ಆದೇಶ ಸಂಖ್ಯೆ:ಕಾಶಿಇ/ನೇವಿ-1/ಗ್ರಂಸಹು/192/2021-22, ಬೆಂಗಳೂರು, ದಿನಾಂಕ:** 19.11.25

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕಾಲೇಜು ಶಿಕ್ಷಣ ಇಲಾಖೆಯ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಗ್ರಂಥಾಲಯ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಕರ್ನಾಟಕ ಲೋಕ ಸೇವಾ ಆಯೋಗವು ಪ್ರಕಟಿಸಿರುವ ಅಂತಿಮ ಆಯ್ಕೆಪಟ್ಟಿಯಲ್ಲಿ ಕ್ರಮ ಸಂಖ್ಯೆ:(7) ರಲ್ಲಿನ ಶ್ರೀ.ದೇವಿಂದ್ರಪ್ಪ, (Reg.No.:8709112) ಇವರು ಹೊರರಾಜ್ಯದ ವಿಶ್ವವಿದ್ಯಾಲಯದಿಂದ ಪಡೆದಿರುವ 01 ವರ್ಷದ ಡಿಪ್ಲೊಮಾ ವಿದ್ಯಾರ್ಹತೆಯು (ಗ್ರಂಥಾಲಯ ವಿಷಯ) ರಾಜ್ಯದ 03 ವರ್ಷಗಳ ಡಿಪ್ಲೊಮಾ ವಿದ್ಯಾರ್ಹತೆ ಸಮಾನಾಂತರವಾಗುವುದಿಲ್ಲ. ಆದ್ದರಿಂದ ಶ್ರೀ.ದೇವಿಂದ್ರಪ್ಪ, ಇವರನ್ನು ಇಲಾಖೆಯ ಗ್ರಂಥಾಲಯ ಸಹಾಯಕರ ಹುದ್ದೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

ಆಯುಕ್ತರು
**ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ,**
ಶ್ರೀ.ದೇವಿಂದ್ರಪ್ಪ
ಸರ್ಕಾರಿ ಶಾಲೆಯ ಹತ್ತಿರ, ಶಹಾಪುರ,
ಕದಮಗೇರ, ಯಾದಗಿರಿ-585319.

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001.
2. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
3. ಕಛೇರಿ ಪ್ರತಿ.

O/c